# ಬೆಳದಿಂಗಳ ಮಾಯೆ

ಮಾಯೆ ಎಂದರೆ ಒಂದು ಆವರಣ. ಒಂದು ಮೋಹಕವಾದ ಮುಸುಕು. ಒಂದು ಪರಿಣಾಮ. ಅಲ್ಲಮ ಪ್ರಭು ಸ್ವಯಂ ಅಪರಿಣಾಮಿಯಾದರೂ ಪರಿಣಾಮಗಳಲ್ಲೆಲ್ಲ ಮನದ ಪರಿಣಾಮವೆ ಚೆಲುವು ಎನ್ನುತ್ತಾನೆ. ಅಲ್ಲಮ ಮಾಯೆಯ ಪರದೆ ಹರಿದವನು. ಹರಿದರೂ, ಅದರೊಳಗಿನ ಚೆಲುವನ್ನು ಬಲ್ಲವನು! ಬೇಂದ್ರೆಯವರು ಓಂಕಾರದ ಶಂಖನಾದಕ್ಕಿಂತ ಕಿಂಚಿದೂನ ಎಂದು ಶಬ್ದದ ಮಾಯೆಯನ್ನು ಬಣ್ಣಿಸಿದ್ದು ಅಲ್ಲಮನ ಮಾತಿಗೆ ಹತ್ತಿರವಿದೆ.

ಶಬ್ದಗಳಲ್ಲೇ ಒಂದು ಆವರಣವಿದೆ. ಶಬ್ದಗಳು ಪರಸ್ಪರ ಸೇರುತ್ತ ಹೊಸತೇ ಆದ ಆವರಣವೊಂದನ್ನು ಸೃಜಿಸುತ್ತ ಬೆಳೆಯುತ್ತವೆ. ಈ ಆವರಣದಲ್ಲಿ ಸೇರದ ಸೇರಲಾಗದ ವಸ್ತುವಿಲ್ಲ, ಅನುಭವವಿಲ್ಲ. ಮನಸ್ಸು ಎಲ್ಲೆಡೆ ಇರುವುದರಿಂದ, ಶಬ್ದಾರ್ಥಗಳು ಮನಸ್ಸನ್ನು ಸೆಳೆಯುವುದರಿಂದ, ಆವರಣವು ಹಿಗ್ಗುತ್ತ ಹೋಗುತ್ತದೆ.

ನಮ್ಮೂರಿನ ಬೆಳದಿಂಗಳು ಎನ್ನುವ ಈ ಬರವಣಿಗೆಯ ಮಾಯೆಯನ್ನು ನೋಡಿ: ನಮ್ಮೂರಿನ ಬೆಳದಿಂಗಳು ಬೆಳ್ಳಿಯ ಬಟ್ಟಲು; ಅಚ್ಚ ಬಿಳಿ ಬಣ್ಣದ ಮಿಂಚುವ ಜರಿಹಾಳೆಯ ಜಾಲರಿ; ಇದೀಗ ಹಿಂಡಿ ಹೊರತಂದ ಹಾಲಿನ ಬಿಂದಿಗೆಯ ತುಳುಕಿದ ನೊರೆ; ಹರೆಯದ ಹುಡುಗಿಯ ಚೆಲ್ಲಿದ ನಗೆ; ಚಲಿಸುವ ತೊರೆಗೆ ಶಾಪತಗುಲಿ ಅಮೃತಶಿಲೆಯಾದ ಕಥೆ; ಬೆಳಕು– ಕತ್ತಲೆಯ ನಡುವೆ ನಿಂತ ಮುಸ್ಸಂಜೆಯಂಥ ಸಾವಿನ ಛಾಯೆ; ಅರ್ಥದ ಮಾಯೆಯಲ್ಲಿ ನಾಚಿನಿಂತ ಬೆಡಗಿನ ಸಾಲು; ವೇಗ– ಆತಂಕ– ಉದ್ವಿಗ್ನತೆಗೆ ಬೀಗ ಜಡಿದು ನಡದಲ್ಲಿ ನೇತಾಡುವ ಸಂತೋಷದ ಕೀಲಿಕೈ; ಬೇಡವೆಂದರೂ ಮತ್ತೆ ಮತ್ತೆ ಆಕರ್ಷಿಸುವ ಹರೆಯದ ಉದ್ರೇಕ; ದೆಶೆದಿಕ್ಕುಗಳಲ್ಲಿ ಉದಾರವಾಗಿ ಚೆಲ್ಲಿದ ಅಕ್ಕಿಯ ಹಿಟ್ಟು; ಗಗನದ ಅಂಗಳದಲ್ಲಿ ಗೋಚರಿಸುವ ತಾಯಿಯ ತೆರೆದ ಹಸ್ತ; ಗಾಳಿ; ಅಗ್ನಿ; ನೀರು; ಭೂಮಿ, ಆಕಾಶಗಳು ಸುಟ್ಟು ಹದಗೊಂಡು ತಾಯಿಯ ಕೈಯಿಂದ ತಟ್ಟಿ ಅಂಗೈಗಿಟ್ಟ ಕೈ ರೊಟ್ಟಿ; ಜೀವಜಂತುಗಳ ಮೈತಾಪ ಇಳಿದು ತಣ್ಣಗಿನ ಶಾಂತ ವಾತಾವರಣದಲ್ಲಿ ಈಜುವ ಪ್ರಲೋಭನೆಗೀಡುಮಾಡುವ ದೈವೀ ಸಮಯ; ಲೋಕದ ಕಿರುಕುಳಗಳಿಂದ ಪಾರುಮಾಡಿ ಏಕಾಂತದ ದಟ್ಟಾರಣ್ಯ ನಿರ್ಮಿಸಿ ಪ್ರೇಮದ ಲೀಲೆಗೆ ಅನುವು ಮಾಡಿಕೊಟ್ಟ ಮಂದ ಬೆಳಗಿನ ಗಾಜಿನ ಬಲ್ಬು. ಆದರೆ ಅಂದು ಅದು ದೇವರು ಕಿತ್ತುಕೊಂಡ ಕಣ್ಣಿನಂತಿತ್ತು.ಆಕೆ ಸತ್ತ ಸುದ್ದಿ ಬಂದದ್ದು ಆ ದಿನದ ಆ ಬೆಳದಿಂಗಳಿನ ಸಮಯದಲ್ಲಾಗಿತ್ತು.

ಇದು ಎಸ್.ಎಫ್.ಯೋಗಪ್ಪನವರ್ ಬರವಣಿಗೆ. 'ಪ್ರೀತಿ ಎಂಬುದು ಚಂದ್ರನ ದಯೆ' ಎಂಬ ಅವರ ಕಾದಂಬರಿಯ ಮೊದಲ ಅಧ್ಯಾಯವಿದು.

ಈ ಬರವಣಿಗೆಯ ಬಗೆಗೆ ಏನು ಹೇಳುವುದಕ್ಕೂ ಹಿಂಜರಿಕೆಯಾಗುತ್ತದೆ. ನಮ್ಮ ಬೆರಳು ಸೋಕಿದರೆ ಎಲ್ಲಿ ಮಸುಕಾದೀತೋ ಎಂಬ ಹಿಂಜರಿಕೆ. ಅನುಭವ ಮತ್ತು ಭಾಷೆಯಲ್ಲಿ ಮೂಡಿ ಬಂದ ಅದರ ಚಿತ್ರ, ಮಲ್ಲಿಗೆಯ ಅಟ್ಟೆಯ ಮೇಲೆ ಮಲ್ಲಿಗೆ ಅಟ್ಟೆಯನ್ನು ಮಲಗಿಸಿದಂತೆ, ಬೆಳದಿಂಗಳಿನ ಮೇಲೆ ಬೆಳದಿಂಗಳಿನದೇ ಮಸ್ಲಿನ್ ಹೊದಿಕೆ ಹಾಸಿದಂತೆ, ನೀರಿನಲ್ಲಿ ನೀರು ಬೆರೆತಂತೆ ಇದೆ. ಕನ್ನಡವು ಕನ್ನಡವ ಕನ್ನಡಿಸುತಿರಬೇಕು ಎಂಬ ಬೇಂದ್ರೆ ಮಾತು ನೆನಪಾಗುತ್ತೆ. ನಾವು ತಿಳಿ; ಸ್ವಚ್ಛ; ಕನ್ನಡಿಯಂತೆ ಪಾರದರ್ಶಕ ಎನ್ನುವಾಗ ಸಾಮಾನ್ಯವಾಗಿ ಮುಗ್ಧವಾದ ಒಂದು ಅರ್ಥವನ್ನು ಮಾಡಿಕೊಂಡಿರುತ್ತೇವೆ. ಆದರೆ ಪಾರದರ್ಶಕ ಎನ್ನುವಾಗ ತಳದ ಕೆಸರೂ ಕಾಣುವಂತೆ ಪಾರದರ್ಶಕ ಎಂದು ಅರ್ಥ. ತಳದ ಕೆಸರು ಕೂಡ ಆ ಪಾರದರ್ಶಕತೆಗೆ ತನ್ನನ್ನು ಒಡ್ಡಿಕೊಂಡಿದೆ!

ಇಲ್ಲಿ ಬೆಳದಿಂಗಳನ್ನು ಹದಿನಾಲ್ಕು ರೂಪಕಗಳ ತಂಬಿಗೆಗಳಲ್ಲಿ ಹಿಡಿದಿಡಲಾಗಿದೆ. ಅವುಗಳಲ್ಲಿ ಈ ನಾಲ್ಕು ಚಲಿಸುವ ತೊರೆಗೆ ಶಾಪ ತಗುಲಿ ಅಮೃತಶಿಲೆಯಾದ ಕಥೆ; ಬೆಳಕು ಕತ್ತಲೆಯ ನಡುವೆ ನಿಂತ ಮುಸ್ಸಂಜೆಯಂಥ ಸಾವಿನ ಛಾಯೆ; ಅರ್ಥದ ಮಾಯೆಯಲ್ಲಿ ನಾಚಿನಿಂತ ಬೆಡಗಿನ ಸಾಲು; ವೇಗ ಆತಂಕ ಉದ್ವಿಗ್ನತೆಗೆ ಬೀಗ ಜಡಿದು ನಡದಲ್ಲಿ ನೇತಾಡುವ ಸಂತೋಷದ ಕೀಲಿಕೈ ಈ ನಾಲ್ಕು, ಬರಿಯ ಆಹ್ಲಾದದಾಯಕವಾದ ನಳನಳಿಸುವ ಅನುಭವವನ್ನು ಮಾತ್ರ ಹೇಳುತ್ತಿಲ್ಲ. ಇನ್ನೇನನ್ನೋ ಹೇಳಲು ಬಯಸುತ್ತಿವೆ; ತಂಬಿಗೆಗೆ ಹೇಗೋ ಬಂದ ಮೀನು ಹೊರಗೆ ಜಿಗಿಯಲು ತವಕಿಸುವಂತೆ. ಆಟದಂತೆ ಕಾಣುವ ಚಡಪಡಿಕೆ! ಇನ್ನು ಆ ಕೊನೆಯ ಸಾಲು! ಅದರ ಬಗೆಗೆ ಮತ್ತೆ ಬರೆಯುವೆ.

■ **ತೋಷ**

## ಮಾತೇ ಮುತ್ತು

★ ಹೂವಿನ ಪರಿಮಳ ಗಾಳಿ ಬಂದ ದಿಕ್ಕಿಗೆ ಮಾತ್ರ ಪಸರಿಸುತ್ತದೆ. ಒಳ್ಳೆಯತನ ಎಲ್ಲ ದಿಕ್ಕುಗಳಿಗೂ ಸುಗಂಧ ಹರಡುತ್ತದೆ.

-ಚಾಣಕ್ಯ

★ ಕವಿಯಾಗಿರುವುದೆಂದರೆ ಅದೊಂದು ಸ್ಥಿತಿ; ವೃತ್ತಿಯಲ್ಲ.

-ರಾಬರ್ಟ್ ಫ್ರಾಸ್ಟ್

★ ಸತ್ಯವೆಂದರೆ ದಾರಿಯಿಲ್ಲದ ಬಯಲು. ಈ ಬಯಲಿಗೆ ನಿಮ್ಮನ್ನು ಯಾವ ಧರ್ಮವೂ, ದಾರಿಯೂ ಕರೆದೊಯ್ಯಲಾರದು.

-ಜಿಡ್ಡು ಕೃಷ್ಣಮೂರ್ತಿ

★ ಕಲೆಯ ಉದ್ದೇಶ ಒಂದು ವಸ್ತುವಿನ ಹೊರಗಿನ ಸ್ವರೂಪವನ್ನು ತೋರಿಸುವುದು ಅಲ್ಲ; ಒಳಗಿನ ಮಹತ್ವವನ್ನು ಮನಗಾಣಿಸುವುದು.

-ಅರಿಸ್ಟಾಟಲ್

★ ಬೇರೆ ಯಾರೂ ಬಂದು ರಕ್ಷಿಸುವುದಿಲ್ಲ. ನಮ್ಮ ದಾರಿಯನ್ನು ನಾವೇ ನಡೆದು ಸವೆಸಬೇಕು.

-ಗೌತಮ ಬುದ್ಧ

★ ಯಾವ ಪ್ರತಿಫಲವನ್ನು ಬೇಡದ ನಿಸ್ವಾರ್ಥ ವ್ಯಕ್ತಿಯೇ ಅತ್ಯಂತ ಯಶಸ್ವಿ ವ್ಯಕ್ತಿ.

-ಸ್ವಾಮಿ ವಿವೇಕಾನಂದ

★ ಸಂಗೀತ ಎನ್ನುವುದೊಂದು ನೈತಿಕ ಕಾನೂನು. ಅದು ಜಗತ್ತಿಗೆ ಆತ್ಮವನ್ನು ಕೊಡುತ್ತದೆ. ಮನಸ್ಸಿಗೆ ರೆಕ್ಕೆಗಳನ್ನು, ಕಲ್ಪನೆಗೆ ಆವೇಗವನ್ನು ಮತ್ತು ಜೀವನಕ್ಕೆ ಸೌಂದರ್ಯವನ್ನು ಕೊಡುತ್ತದೆ.

-ಪ್ಲೆಟೋ

★ ಪ್ರೀತಿಯ ಸ್ಪರ್ಶವಿದ್ದರೆ ಎಲ್ಲ ನೋವುಗಳು ಔಷಧಿಗಳಾಗುತ್ತವೆ.

-ರೂಮಿ

★ ಸದಾಕಾಲ ಚಟುವಟಿಕೆಯಿಂದ ಇರುವ ಜೀವನದ ಖಾಲಿತನದ ಬಗ್ಗೆ ಎಚ್ಚರದಿಂದಿರಿ.

-ಸಾಕ್ರೆಟಿಸ್

★ ಕಳೆದುಹೋದ ನಿನ್ನೆ ನಮ್ಮದಲ್ಲ. ಆದರೆ ಗೆಲ್ಲಲು ಅಥವಾ ಕಳೆದುಕೊಳ್ಳಲು ನಾಳೆ ನಮ್ಮದೇ.

-ಲಿಂಡನ್ ಬಿ.ಜಾನ್ಸನ್

★ ಎಲ್ಲರೂ ತಾವು ಜೀವಿಸುವ ಕಾಲದ ಶಿಶುಗಳೇ. ಆದರೆ ಕೆಲವರು ಮಾತ್ರ ಆಯಾ ಕಾಲದ ಆಲೋಚನೆಗಳಿಗಿಂತ ಎತ್ತರಕ್ಕೆ ಏರುತ್ತಾರೆ.

-ವಾಲ್ಟೇರ್

★ ನಿಮ್ಮ ಬಗ್ಗೆ ನಿಮಗೆ ನಂಬಿಕೆ ಇಲ್ಲವೆಂದಾದಲ್ಲಿ ದೇವರ ಮೇಲೂ ನಿಮಗೆ ನಂಬಿಕೆ ಇಲ್ಲ.

-ಸ್ವಾಮಿ ವಿವೇಕಾನಂದ

★ ನಿಮ್ಮ ಮತ್ತು ನಿಮ್ಮ ಕನಸಿನ ನಡುವೆ ಇರುವ ಏಕೈಕ ತಡೆಯೆಂದರೆ ಹಿಂಜರಿಕೆ ಮಾತ್ರ.

-ಕೆರೋಲ್ ಬ್ರಿಯಾಂಟ್

★ ನೀವು ಏನಾಗಿಲ್ಲವೋ ಅದಕ್ಕಾಗಿ ಪ್ರೀತಿಸಲ್ಪಡುವುಕ್ಕಿಂತ, ನೀವು ಏನಾಗಿದ್ದೀರೊ ಅದಕ್ಕಾಗಿ ದ್ವೇಷಿಸಲ್ಪಡುವುದು ಒಳ್ಳೆಯದು.

-ಆಂಡ್ರೆ ಗೈಡ್

★ ಮದುವೆಯಾದವರ ಅಸಂತೋಷಕ್ಕೆ ಪ್ರೀತಿಯ ಕೊರತೆ ಕಾರಣವಲ್ಲ; ಸ್ನೇಹದ ಕೊರತೆ ಕಾರಣ.

-ಫ್ರೆಡ್ರಿಕ್ ನೀಟ್ಸೆ

★ ಹೇಗೆ, ಎಲ್ಲಿ ಮತ್ತು ಯಾಕೆ ಎಂದು ಗೊತ್ತಿಲ್ಲದೆ ನಾನು ನಿನ್ನನ್ನು ಪ್ರೀತಿಸುತ್ತೇನೆ. ಈ ಪ್ರೀತಿ ಎಷ್ಟು ಗಾಢವೆಂದರೆ ನನಗೆ ನಿದ್ರೆ ಬಂದರೆ ನಿನ್ನ ರೆಪ್ಪೆಗಳು ಮುಚ್ಚಿಕೊಳ್ಳುತ್ತವೆ.

-ಪಾಬ್ಲೊ ನೆರೂಡ

★ ಎಲ್ಲರನ್ನು ಪ್ರೀತಿಸಿ, ಕೆಲವರನ್ನು ಮಾತ್ರ ನಂಬಿ. ಯಾರಿಗೂ ಕೆಡುಕು ಉಂಟುಮಾಡಬೇಡಿ.

-ವಿಲಿಯಂ ಷೇಕ್ಸ್‌ಪಿಯರ್